## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 1530 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : 21.03.2025 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬಾಲಭವನವು ರಾಜ್ಯದ ಎಷ್ಟು ಜಿಲ್ಲೆಗಳಲ್ಲಿವೆ ಹಾಗೂ ಇವುಗಳು ಪ್ರತಿಯೊಂದು ಜಿಲ್ಲೆಯಲ್ಲಿಯೂ ಎಷ್ಟು ಎಕರೆ ಜಮೀನನ್ನು ಹೊಂದಿದೆ; (ಜಿಲ್ಲಾವಾರು ವಿವರ ಒದಗಿಸುವುದು) | ಕೇಂದ್ರ ಬಾಲ ಭವನ ಒಳಗೊಂಡಂತೆ ಒಟ್ಟು 31 ಜಿಲ್ಲೆಗಳಲ್ಲಿ ಬಾಲಭವನಗಳು ಕಾರ್ಯ ನಿರ್ವಹಿಸುತ್ತಿವೆ.<br><br>ಇವುಗಳಲ್ಲಿ 16 ಜಿಲ್ಲಾ ಬಾಲ ಭವನ ಹಾಗೂ 16 ತಾಲ್ಲೂಕು ಬಾಲ ಭವನಗಳು ಸ್ವಂತ ಕಟ್ಟಡ/ನಿವೇಶನವನ್ನು ಹೊಂದಿದ್ದು, ಜಿಲ್ಲಾ ಬಾಲಭವನಗಳು ಹೊಂದಿರುವ ಜಮೀನು ವಿವರಗಳನ್ನು **ಅನುಬಂಧ-1** ರಲ್ಲಿ ಹಾಗೂ ತಾಲ್ಲೂಕು ಬಾಲಭವನಗಳು ಹೊಂದಿರುವ ಜಮೀನು ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ.<br><br>ಕೇಂದ್ರ ಬಾಲಭವನ ಒಳಗೊಂಡಂತೆ 8 ಜಿಲ್ಲಾ ಬಾಲಭವನಗಳು ಗುತ್ತಿಗೆ ಆಧಾರದಲ್ಲಿ ಪಡೆದ ನಿವೇಶನ/ಕಟ್ಟಡ ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವುಗಳು ಹೊಂದಿರುವ ಜಮೀನಿನ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ<br><br>ಇನ್ನುಳಿದ ವಿಜಯನಗರ, ಶಿವಮೊಗ್ಗ, ಬಳ್ಳಾರಿ, ಗದಗ ಹಾಸನ, ಚಾಮರಾಜನಗರ ಹಾಗೂ ರಾಮನಗರ ಜಿಲ್ಲೆಗಳ ಬಾಲಭವನಗಳು ನಿವೇಶನ/ಸ್ವಂತ ಕಟ್ಟಡ ಹೊಂದಿರುವುದಿಲ್ಲ. |
| (ಆ) | ಮಕ್ಕಳ ಚಟುವಟಿಕೆಗಾಗಿ ಮೀಸಲಿಟ್ಟಿರುವ ಜಾಗದಲ್ಲಿ ಯಾವ ಯಾವ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ; ಮಕ್ಕಳ ಚಟುವಟಿಕೆಗಾಗಿ ಇಲಾಖಾ ವತಿಯಿಂದ ಎಷ್ಟು ಸಿಬ್ಬಂದಿಗಳನ್ನು ನೇಮಿಸಲಾಗಿದೆ; | ಪ್ರಸ್ತುತ ಕೇಂದ್ರ ಬಾಲ ಭವನ ಹಾಗೂ 25 ಜಿಲ್ಲಾ ಬಾಲಭವನಗಳಲ್ಲಿ ಈ ಕೆಳಕಂಡ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ.<br>• 05 ರಿಂದ 16 ವರ್ಷದ ಮಕ್ಕಳಿಗೆ ಬಾಲ ವೇದಿಕೆ ಕಾರ್ಯಕ್ರಮದಲ್ಲಿ ಮಕ್ಕಳಿಂದ ನೃತ್ಯ ಪ್ರದರ್ಶನ, ಸಮೂಹ ಗಾಯನ, ವಿವಿಧ ವಾದ್ಯ ಸಂಗೀತ, ನಾಟಕ ಪ್ರದರ್ಶನ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>• ಜಿಲ್ಲಾ ಬಾಲ ಭವನಗಳಲ್ಲಿ ಚಿತ್ರಕಲೆ, ಜೇಡಿಮಣ್ಣಿನ ಕಲೆ, ಕರಕುಶಲ ಕಲೆ, ಪ್ರಬಂಧ ಸ್ಪರ್ಧೆ ಮೊದಲಾದ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ<br><br>ಮಕ್ಕಳ ಚಟುವಟಿಕೆಗಳಿಗಾಗಿ ಪ್ರಸ್ತುತ 25 ಜಿಲ್ಲೆಗಳಲ್ಲಿ ತಾತ್ಕಾಲಿಕ ಗೌರವಧನ ಆಧಾರದ ಮೇಲೆ ಒಬ್ಬರು ಕಾರ್ಯಕ್ರಮ |

| | | |
|---|---|---|
| | | ಸಂಯೋಜಕರು ಹಾಗೂ ಒಬ್ಬರು ಕಛೇರಿ ಸಹಾಯಕರನ್ನು ನೇಮಿಸಿಕೊಳ್ಳಲಾಗಿದ್ದು, ಕಾರ್ಯಕ್ರಮ ಸಂಯೋಜಕರು ಒಟ್ಟು-23 ಮತ್ತು ಕಛೇರಿ ಸಹಾಯಕರು ಒಟ್ಟು-21 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಉಳಿದ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ ರಾಮನಗರ, ವಿಜಯನಗರ, ಬಾಗಲಕೋಟೆ ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆಗೆ ಕ್ರಮ ಕೈಗೊಳ್ಳಲಾಗಿದೆ.<br><br>ಕೇಂದ್ರ ಬಾಲಭವನ ಬೆಂಗಳೂರು ಇಲ್ಲಿ ಇಬ್ಬರು ಖಾಯಂ ಸಿಬ್ಬಂದಿಗಳ ಜೊತೆಗೆ ಬಾಹ್ಯ ಮೂಲದಿಂದ ನುರಿತ ಸಿಬ್ಬಂದಿಗಳನ್ನು ನಿಯೋಜಿಸಿ ಮಕ್ಕಳ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ |
| (ಇ) | ಅಧಿಕಾರಿಗಳ ನಿರ್ಲಕ್ಷ್ಯ ನಿರ್ವಹಣೆ ಕೊರತೆಯಿಂದ ಬಾಲಭವನದ ನೂರಾರು ಎಕರೆ ಭೂಮಿ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ<br><br>ಬಂದಿದ್ದರೆ, ಇದರ ಬಗ್ಗೆ ಯಾವ ಕ್ರಮ ಕೈಗೊಂಡಿದೆ; ಹಾಗೂ ಎಷ್ಟು ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ. (ಜಿಲ್ಲಾವಾರು ವಿವರ ಒದಗಿಸುವುದು) | ಜಿಲ್ಲಾಮಟ್ಟದ ಬಾಲ ಭವನದ ಭೂಮಿ ಒತ್ತುವರಿಯಾಗಿರುವುದಿಲ್ಲ. |
| (ಈ) | ಪ್ರಸ್ತುತ ಇರುವಂತಹ ಬಾಲ ಭವನದಲ್ಲಿರುವ ಮಕ್ಕಳ ಆಟಿಕೆ ಸಾಮಾನುಗಳು ಬಹುತೇಕವಾಗಿ ಕೆಟ್ಟು ತುಕ್ಕು ಹಿಡಿದಿರುವುದನ್ನು ಅಧಿಕಾರಿಗಳು ಗಮನಹರಿಸಿದ್ದಾರೆಯೇ, ಹಾಗಿದ್ದಲ್ಲಿ ತೆಗೆದುಕೊಂಡ ಕ್ರಮವೇನು? | ಪ್ರಸ್ತುತ ಕೇಂದ್ರ ಬಾಲ ಭವನದಲ್ಲಿರುವ ಸೈನ್ಸ್ ಪಾರ್ಕ್ ಹಾಗೂ ಮಕ್ಕಳ ಆಟಿಕೆಗಳ ಉದ್ಯಾನವನವನ್ನು ಪುನಶ್ಚೇತನಗೊಳಿಸಲು ಕಾರ್ಯ ಪ್ರಾರಂಭಿಸಲಾಗಿದೆ. ಜಿಲ್ಲಾ ಮತ್ತು ತಾಲ್ಲೂಕು ಬಾಲ ಭವನಗಳಲ್ಲಿ ಅಳವಡಿಸಲಾಗಿರುವ ಆಟಿಕೆಗಳನ್ನು ಸಂರಕ್ಷಿಸಲು/ದುರಸ್ತಿಗೊಳಿಸಲು ನಿಯಮಾನುಸಾರ ಅಂದಾಜು ಪ್ರಸ್ತಾವನೆಯನ್ನು ಪಡೆದು ಜಿಲ್ಲೆಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ದುರಸ್ತಿ ಕಾರ್ಯ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ಮಮಇ 33 ರಾಮಅ 2025

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

## ಅನುಬಂಧ-1
## ಜಿಲ್ಲಾ ಬಾಲ ಭವನಗಳ ಆಸ್ತಿಯ ವಿವರ

| ಕ್ರ. ಸಂ | ಜಿಲ್ಲಾ ಬಾಲಭವನ | ಖಾತೆಯ ಹೆಸರು | ಒಟ್ಟು ಭೂಮಿ (ಚದರ ಅಡಿಗಳಲ್ಲಿ) |
|---|---|---|---|
| 1 | ಕಲಬುರಗಿ | ಬಾಲ ಭವನ | 46288.00 |
| 2 | ಬಾಗಲಕೋಟೆ | ಅಧ್ಯಕ್ಷರು, ಬಾಲ ಭವನ ಸೊಸೈಟಿ ಹಾಗೂ ಕಾರ್ಯದರ್ಶಿಗಳು, ಬಾಲ ಭವನ ಸೊಸೈಟಿ. | 50094.00 |
| 3 | ಬೀದರ್ | ಕಾರ್ಯದರ್ಶಿಗಳು, ಬಾಲ ಭವನ ಸಮಿತಿ | 65340.00 |
| 4 | ಬೆಂಗಳೂರು ಗ್ರಾಮಾಂತರ | ಕಾರ್ಯದರ್ಶಿಗಳು, ಜಿಲ್ಲಾ ಬಾಲ ಭವನ ಸಮಿತಿ | 355014.00 |
| 5 | ವಿಜಯಪುರ | ಜಿಲ್ಲಾ ಬಾಲ ಭವನ | 54450.00 |
| 6 | ಉಡುಪಿ | ಜಿಲ್ಲಾ ಬಾಲ ಭವನ | 44431.00 |
| 7 | ಕೋಲಾರ | ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ ಅಧ್ಯಕ್ಷರು, ಬಾಲ ಭವನ ಸಮಿತಿ ಕೋಲಾರ ಮತ್ತು ಉಪನಿರ್ದೇಶಕರು ಮ.ಮ.ಅ.ಇ | 15806.00 |
| 8 | ತುಮಕೂರು | ಕಾರ್ಯದರ್ಶಿಗಳು, ಜಿಲ್ಲಾ ಬಾಲ ಭವನ ತುಮಕೂರು ಜಿಲ್ಲೆ | 145926.00 |
| 9 | ರಾಯಚೂರು | ಕಾರ್ಯದರ್ಶಿಗಳು, ಬಾಲ ಭವನ ಸಮಿತಿ | 130860.00 |
| 10 | ಹಾವೇರಿ | ಅಧ್ಯಕ್ಷರು, ಬಾಲ ಭವನ ಸೊಸೈಟಿ ಹಾಗೂ ಕಾರ್ಯದರ್ಶಿಗಳು, ಬಾಲ ಭವನ ಸೊಸೈಟಿ. | 70875.00 |
| 11 | ಯಾದಗಿರಿ | ಕಾರ್ಯದರ್ಶಿಗಳು, ಬಾಲ ಭವನ ಸಮಿತಿ | 2363.00 |
| 12 | ಚಿತ್ರದುರ್ಗ | ಉಪನಿರ್ದೇಶಕರು, ಮ.ಮ.ಅ.ಇ ಚಿತ್ರದುರ್ಗ ಬಾಲ ಭವನ ಕಟ್ಟಡ ನಿರ್ಮಾಣಕ್ಕಾಗಿ | 141570.00 |
| 13 | ಬೆಳಗಾವಿ ಶ್ರೀನಗರ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 87120.00 |
| 14 | ಚಿಕ್ಕಬಳ್ಳಾಪುರ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 304920.00 |
| 15 | ಕೊಡಗು | ಉಪನಿರ್ದೇಶಕರು, ಮ.ಮ.ಅ.ಇ ಕೊಡಗು ಬಾಲ ಭವನ ಕಟ್ಟಡ ನಿರ್ಮಾಣಕ್ಕಾಗಿ | 21780.00 |
| 16 | ಕೊಪ್ಪಳ | ಉಪನಿರ್ದೇಶಕರು, ಮ.ಮ.ಅ.ಇ ಕೊಡಗು ಬಾಲ ಭವನ ಕೊಪ್ಪಳ ಕಟ್ಟಡ ನಿರ್ಮಾಣಕ್ಕಾಗಿ | 43560.00 |
| | | **ಒಟ್ಟು** | **1580397.00** |

## ಅನುಬಂಧ -2

## ತಾಲ್ಲೂಕು ಬಾಲ ಭವನಗಳ ಆಸ್ತಿಯ ವಿವರ

| ಕ್ರ. ಸಂ | ತಾಲ್ಲೂಕು ಬಾಲಭವನ | ಖಾತೆಯ ಹೆಸರು | ಒಟ್ಟು ಭೂಮಿ (ಚದರ ಅಡಿಗಳಲ್ಲಿ) |
|---|---|---|---|
| 1 | ಬೆಳಗಾವಿ ಬಿ.ಸಿ. ಹೋಂ ಆಫೀಸ್ ಬ್ಯಾಕ್ ಸೈಟ್, ಜಾಧವ್ ನಗರ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 130650.00 |
| 2 | ಶಿಡ್ಲಘಟ್ಟ (ಚಿಕ್ಕಬಳ್ಳಾಪುರ ಜಿಲ್ಲೆ) | ತಾಲ್ಲೂಕು ಬಾಲ ಭವನ ಉಗ್ರಾಣ – ಮ.ಮ.ಅ.ಇ | 43560.00 |
| 3 | ಬಸವಕಲ್ಯಾಣ (ಬೀದರ್ ಜಿಲ್ಲೆ) | ತಾಲ್ಲೂಕು ಬಾಲ ಭವನ ಬಸವಕಲ್ಯಾಣ | 60984.00 |
| 4 | ಅಥಣಿ (ಬೆಳಗಾವಿ ಜಿಲ್ಲೆ) | ಆಡಳಿತಾಧಿಕಾರಿ, ಬಾಲ ಭವನ ಬೆಂಗಳೂರು. | 1000.00 |
| 5 | ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ) | ತಾಲ್ಲೂಕು ಬಾಲ ಭವನ | 174240.00 |
| 6 | ಕೊಪ್ಪ (ಚಿಕ್ಕ ಮಗಳೂರು ಜಿಲ್ಲೆ) | ತಾಲ್ಲೂಕು ಬಾಲ ಭವನ | 217800.00 |
| 7 | ಕಡೂರು (ಚಿಕ್ಕ ಮಗಳೂರು ಜಿಲ್ಲೆ) | ತಾಲ್ಲೂಕು ಬಾಲ ಭವನ | 287496.00 |
| 8 | ಮೂಡಿಗೆರೆ (ಚಿಕ್ಕ ಮಗಳೂರು ಜಿಲ್ಲೆ) | ತಾಲ್ಲೂಕು ಬಾಲ ಭವನ | 3811.50 |
| 9 | ನಿಪ್ಪಾಣಿ (ಬೆಳಗಾವಿ ಜಿಲ್ಲೆ) | ಕಾರ್ಯದರ್ಶಿಗಳು, ಬಾಲ ಭವನ ಸೊಸೈಟಿ, ಬೆಂಗಳೂರು. | 2400.00 |
| 10 | ರಾಯಚೂರು (ಲಿಂಗಸುಗೂರು) | ಬಾಲ ಭವನಕ್ಕಾಗಿ | 26136.00 |
| 11 | ಮಂಡ್ಯ (ಮಳವಳ್ಳಿ) | ಬಾಲ ಭವನ ಸಮಿತಿ | 2260.00 |
| 12 | ಚಿತ್ತಾಪುರ (ಕಲಬುರಗಿ ಜಿಲ್ಲೆ) | ಶಿಶು ಅಭಿವೃದ್ಧಿ ಯೋಜನಾಧಿಕಾರಿ, | 43560.00 |
| 13 | ರಾವೂರು (ಕಲಬುರಗಿ ಜಿಲ್ಲೆ) | ಶಿಶು ಅಭಿವೃದ್ಧಿ ಯೋಜನಾಧಿಕಾರಿ, | 148104.00 |
| 14 | ಬೈಲಹೊಂಗಲ (ಬೆಳಗಾವಿ ಜಿಲ್ಲೆ) | ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮ.ಮ.ಅ.ಇ. ಬೈಲಹೊಂಗಲ | 87120.00 |
| 15 | ಖಾನಾಪುರ (ಬೆಳಗಾವಿ ಜಿಲ್ಲೆ) | ಉಪನಿರ್ದೇಶಕರು, ಮ.ಮ.ಅ.ಇ | 30500.00 |
| 16 | ಮುಂಡರಗಿ (ಗದಗ ಜಿಲ್ಲೆ) | ಶಿಶು ಅಭಿವೃದ್ಧಿ ಯೋಜನಾಧಿಕಾರಿ, | 43561.00 |
| | | **ಒಟ್ಟು** | **13,03,182.50** |

## ಅನುಬಂಧ-3

### ಕೇಂದ್ರ /ಜಿಲ್ಲಾ ಬಾಲ ಭವನಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಗಳು

| ಕ್ರ. ಸಂ | ಜಿಲ್ಲಾ ಬಾಲಭವನ ಉಪಯೋಗಕ್ಕಾಗಿ | ಖಾತೆಯ ವಿವರ | ಒಟ್ಟು ಭೂಮಿ (ಚದರ ಅಡಿಗಳಲ್ಲಿ) |
|---|---|---|---|
| 1 | ಬೆಂಗಳೂರು ನಗರ | ತೋಟಗಾರಿಕೆ ಇಲಾಖೆ | 500940.00 |
| 2 | ದಕ್ಷಿಣ ಕನ್ನಡ | ತೋಟಗಾರಿಕೆ ಇಲಾಖೆ (ಬಾಲ ಭವನಕ್ಕಾಗಿ) | 7622.00 |
| 3 | ದಾವಣಗೆರೆ | ಆಯುಕ್ತರು ಉಮಹಾನಗರ ಪಾಲಿಕೆ (ಮಕ್ಕಳ ಕಾರ್ಯಕ್ರಮಕ್ಕಾಗಿ) | 18031.00 |
| 4 | ಧಾರವಾಡ | ಜಿಲ್ಲಾಧಿಕಾರಿಗಳು (ಬಾಲ ಭವನಕ್ಕಾಗಿ) | 6 4251.00 |
| 5 | ಚಿಕ್ಕಮಗಳೂರು | ನಗರಸಭೆ (30 ವರ್ಷ ಲೀಸ್) 2003ರಿಂದ | 5920.00 |
| 6 | ಮೈಸೂರು | ನಗರ ಸಭೆ | 130680.00 |
| 7 | ಮಂಡ್ಯ | ನಗರ ಸಭೆ | 6350.00 |
| 8 | ಉತ್ತರ ಕನ್ನಡ | ಬಾಲಕಿಯರ ಬಾಲ ಮಂದಿರ (ಬಾಲ ಭವನ ಕಟ್ಟಡ) | 30492.00 |
| | | ಒಟ್ಟು | 764286.00 |